sdmimd

**Prajavaani**

Date: Nov 6, 2015 Page No. 03B

Edition: Mysuru Language: Kannada

# ಸಾಮಾಜಿಕ ಕಳಕಳಿಗೆ ಮುಂದಾಗಿ

## ಟಾಟಾ ಸ್ಟೀಲ್‌ನ ಮಾಜಿ ಅಧ್ಯಕ್ಷ ಬಿ. ಮುತ್ತುರಾಮನ್ ಕರೆ

ಪ್ರಜಾವಾಣಿ ವಾರ್ತೆ

ಮೈಸೂರು: ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಾಲಿಗೆ ಸೇರಿರುವ ಭಾರತದಲ್ಲಿ ಹಲವು ಸಮಸ್ಯೆಗಳು ಹಾಸುಹೊಕ್ಕಾಗಿವೆ. ಇವುಗಳ ನಿವಾರಣೆಗೆ ಉದ್ಯಮಿಗಳು ಸಾಮಾಜಿಕ ಕಳಕಳಿ ತೋರಬೇಕು ಎಂದು ಟಾಟಾ ಸ್ಟೀಲ್‌ನ ಮಾಜಿ ಅಧ್ಯಕ್ಷ ಬಿ. ಮುತ್ತುರಾಮನ್ ಅಭಿಪ್ರಾಯ ಪಟ್ಟರು.

ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಕಾಲೇಜಿನಲ್ಲಿ ಗುರುವಾರ 'ಉದ್ಯಮಗಳಿಂದ ಸಾಮಾಜಿಕ ಕಳಕಳಿ' ಕುರಿತು ಏರ್ಪಡಿಸಿದ್ದ ಎರಡು ದಿನಗಳ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೇರೆ ದೇಶಗಳ ಉದ್ಯಮಿಗಳಿಗೆ ಹೋಲಿಸಿದರೆ ಭಾರತದ ಉದ್ಯಮಿಗಳಲ್ಲಿ ಸಾಮಾಜಿಕ ಕಳಕಳಿ ಒಂದಂಶ ಹೆಚ್ಚಿದೆ ಎಂದು ಹೇಳಬಹುದು. ಈ ಸಾಮಾಜಿಕ ಕಳಕಳಿ ಸಮಾಜದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಮತ್ತಷ್ಟು ಹೆಚ್ಚಾಗಬೇಕಾಗಿದೆ. ಬಹುತೇಕ ಉದ್ಯಮಿಗಳು ಸಮಾಜದ ಹಿತವನ್ನು ಬದಿಗೊತ್ತಿ ಲಾಭ ಗಳಿಕೆಯ ಕಡೆಗೆ ಹೆಚ್ಚು ಒತ್ತು ನೀಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಎಟಿ ಅಂಡ್ ಎಸ್ ಕಂಪೆನಿಯ ಮುಖ್ಯಸ್ಥ ರಾಬರ್ಟ್, ಎಸ್‌ಡಿಎಂಐಎಂಡಿ ಕಾಲೇಜಿನ ಅಧ್ಯಕ್ಷ ಡಾ.ಎನ್.ಆರ್. ಪುರುಷರಾಮ್, ಪ್ರಾಧ್ಯಾಪಕರಾದ ಡಾ.ಎಂ.ಆರ್. ಸುರೇಶ್, ಪ್ರೊ. ಎನ್. ಆರ್. ಗೋವಿಂದ ಶರ್ಮಾ ಹಾಜರಿದ್ದರು.



ಮೈಸೂರಿನಲ್ಲಿ ಗುರುವಾರ ನಡೆದ 'ಉದ್ಯಮಗಳಿಂದ ಸಾಮಾಜಿಕ ಕಳಕಳಿ' ವಿಷಯ ಕುರಿತು ಏರ್ಪಡಿಸಿದ್ದ ಎರಡು ದಿನಗಳ ಸಮ್ಮೇಳನದಲ್ಲಿ ಟಾಟಾ ಸ್ಟೀಲ್‌ನ ಮಾಜಿ ಉಪಾಧ್ಯಕ್ಷ ಬಿ. ಮುತ್ತುರಾಮನ್ ಅವರನ್ನು ಸ್ವಾಗತಿಸಲಾಯಿತು. ಡಾ.ಎನ್.ಆರ್. ಪರಶುರಾಮನ್, ರಾಬರ್ಟ್, ಪ್ರೊ. ಎನ್.ಆರ್. ಗೋವಿಂದ ಶರ್ಮಾ, ಸುರೇಶ್ ಇದ್ದಾರೆ